ಕಲ್ಪನೆ ಕಾವ್ಯ



## ಬೇರಿಗೆ ಹರಕೆ

ಹೊಸ ಚಿಗುರಿನಂತಹ ಚೆಲುವೆಯರು
ಹಳೆ ಬೇರುಗಳ ಬಳಿಸಾರಿ ಏನೋ
ಕಸರತ್ತು ನಡೆಸುವಂತಿದೆ...

ಕನಸಿನ ಕಂಪನಿಯಲಿ
ಕಾಯಕ ಮಾಡುವ ಬಯಕೆಗೋ
ನೆಚ್ಚಿದ ನಲ್ಲನೊಂದಿಗೆ
ನೂರ್ಕಾಲ ನಡೆಯುವಾಸೆಗೋ
ಮುಂಬರುವ ಪರೀಕ್ಷೆಯಲಿ
ಮೊದಲ ಸ್ಥಾನದ ಹಂಬಲಕ್ಕೋ
ಅಂತೂ ಹರಕೆಗೆಂದು ಬೇರುಗಳಿಗೆ
ದಾರ ಕಟ್ಟಿದ್ದಾಯ್ತಲ್ಲ?

ಕಟ್ಟಿದ ಕನಸ ನನಸಾಗಿಸಲು
ಬಾಕಿಯಿರುವುದಿನ್ನೊಂದು ದಾರಿ...
ಅದೇ ಶತ ಪ್ರಯತ್ನ, ಭಗೀರಥ ಪ್ರಯತ್ನ
ದೈವಬಲದೊಂದಿಗೆ
ಮಾನವ ಪ್ರಯತ್ನವೂ ಮಿಳಿತವಾದಾಗ
ಮನದ ಬಯಕೆ ಗುರಿಮುಟ್ಟುವುದು.

**ರಾಜಲಕ್ಷ್ಮಿ ಸುಬ್ರಹ್ಮಣ್ಯ, ಮೈಸೂರು**

## ಆದರೂ...

ಹೇಳಲಾಗದು
ಹೀಗೇ... ಅಂತ ಯಾರಿಂದಲೂ
ಆದರೂ ನಡೆದಿದೆ
ನಡೆಯುತ್ತಿದೆ ಮುಂದೂ... ಕೂಡ

ಆಕಸ್ಮಿಕ ಅಂತಲೂ
ಅನ್ನಬಹುದು ಕೆಲವರು,
ಕೊಡಬಹುದು: ಕಾಗೆ ಕುಳಿತ,
ಟೊಂಗೆ ಮುರಿದ ಉದಾಹರಣೆ!

ಒಂದು ಮಾತಂತೂ ಸತ್ಯ:
ನಂಬಿಕೆಯಲ್ಲೂ ಇದೆ
ಬಲವಾದ ಶಕ್ತಿ!
ಅವರವರ ನಂಬಿಕೆ
ಕಟ್ಟಿದೆ ಬೇರಿಗೆ ಕಾಣಿಕೆ

**ಹ.ಶಿ. ಭೈರನಟ್ಟಿ, ಧಾರವಾಡ**

## ವಿಳಾಸವಿಲ್ಲದ ಕನಸು

ನಂಬಿಕೆಯೆ ವಿಶ್ವಾಸ,
ಭರವಸೆಯೆ ಹೂರಣ,
ಮನಮಂದಿರದ ಮುಂಬಾಗಿಲಿಗೆ
ಅಂತರಾಳದ ಭಾವಗಳೇ ತೋರಣ.

ಅಜ್ಜ ನೆಟ್ಟ ಆಲದ ತುಂಬಾ
ಸಾಲು ಸಾಲು ಆಸೆಗಳ
ಮುಡುಪಿನ ಮಹಾಪೂರ,
ಹಸಿರಲ್ಲಿ ಉಸಿರನ್ನು ಬೆಸೆದವನು
ಅರಿಯಲಾರನೇ? ಹೃದಯದ ಭಾರ!

ಸವೆಯದ ಆಚರಣೆಗಳು
ಅಷ್ಟಕ್ಕೂ ಇರಲಾರದು
ಮರ ಗಿಡಗಳ ನಂಬಿ
ಕೆಟ್ಟ ಉದಾಹರಣೆಗಳು.

ನಿಲ್ಲದ ಬಯಕೆಗಳ ಝಳಕ್ಕೆ,
ನಿಂತು, ನೆರಳು ಕೊಡುವ ಮರ.
ಕಟ್ಟಿದ ಮೀಸಲಿಗೆ ಪ್ರತಿಯಾಗಿ
ಸಿಗಬಹುದೆ ಮೆಚ್ಚುಗೆಯ ವರ!

**ಯಶಸ್ವಿ ರಮೇಶ್, ಮತ್ತೀಕೆರೆ**